RegaNo BG 155

Sri "SATYAVADI"
— DAILY —
MYSORE 4
46 th Year

Protect the cow

— ಶ್ರೀ —

ಸತ್ಯವಾದಿ
SATYAVADI

ಸ್ಥಾಪಕರು– ಅರಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

28—2—1962

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ

ಗೋಸಂರಕ್ಷಣೆ ಮಾಡಿ

ಮಂತ್ರಿ ರಾಚಯ್ಯನವರ ಶೆ ಪರಾಜಯ

ಹೆಗ್ಗಡದೇವನಕೋಟೆ ವಿಾಸಲು ಕ್ಷೇತ್ರದಿಂದ ಸ್ವತಂತ್ರ ಪಕ್ಷದ ಉಮೇದುವಾರ ಶ್ರೀ ಪೀಣ್ಣನವರು ರಾಜ್ಯದ ವ್ಯವಸಾಯ ವಂತ್ರಿ ಶ್ರೀ ಎಚ್. ರಾಚಯ್ಯನವರನ್ನು 4 ವರೆ ಸಹಸ್ರ ಬಹುಮತದಿಂದ ಪರಾಜಯಗೊಳಿಸಿರುವರು

ತೆರಿಗೆ ಹೆಚ್ಚುವುದು

ಮೂರನೆಯ ಪಾಂಚವಾರ್ಷಿಕ ಯೋಜನೆಯ ಉದ್ದೇಶದಿಂದ ಒಂದಾನ್ನಾದಲ್ಲಿ ಹೊಸ ತೆರಿಗೆಗಳನ್ನು ವಿಧಿಸಲಾಗುವದಾಗಿ ಗವರ್ನರ್ ಶ್ರೀ ಸುಕ್ಥಂಕರ್ ರಾಜ್ಯ ವಿಧಾನ ಸಭೆ ಅಧಿವೇಶನ ಆರಂಭಿಸುತ್ತಾ ತಿಳಿಸಿದರು

ಆಚಾರ್ಯ ರಂಗಾರ ಸೋಲು

ಸ್ವತಂತ್ರ ಪಕ್ಷದ ಅಧ್ಯಕ್ಷರಾದ ಆಚಾರ್ಯ ರಂಗಾರವರು ಕಮ್ಯೂನಿಸ್ಟು ಪ್ರತಿಸ್ಪರ್ಧಿ ಶ್ರೀ ವೆಂಕಯ್ಯನವರಿಂದ ತೆನಾಲಿ ಕ್ಷೇತ್ರದಲ್ಲಿ ಪರಾಜಯಗೊಳಿಸಲ್ಪಟ್ಟರು.

ಗೋರೆಯವರ ಸೋಲು

ಪ್ರಜಾ ಸೆಪೇಷಲಿಸ್ಟು ಪಕ್ಷದ ನಾಯಕ ಶ್ರೀ ಎನ್ ಜಿ ಗೋರೆ ಲೋಕ ಸಭೆಯ ಚುನಾವಣೆಯಲ್ಲಿ ಪರಾಜಿತರಾದರು. ಕಾಂಗ್ರೆಸಿನ ಶ್ರೀ ಮೋರೆಯು ವರು ಗೆದ್ದರು.

ಬಸ್ತಾರ ಮಾಜಿ ದೊರೆಯ ಸೋಲು

ಬಸ್ತಾರಿನ ಮಾಜಿ ದೊರೆ ಶ್ರೀ ಪ್ರವೀಣ ಚಂದ್ರ ಭಂಜ ಹೇವ್ ಮಧ್ಯ ಪ್ರದೇಶ ವಿಧಾನ ಸಭೆ ಚುನಾವಣೆಯಲ್ಲಿ ಪರಾಜಿತರಾದರು.

ಖೇರ್‌ರ ಪರಾಜಯ

ಉತ್ತರ ಪ್ರದೇಶದ ಸ್ಪೀಕರ್ ಶ್ರೀ ಖೇರ್‌ರವರು ವಿಧಾನಸಭೆ ಚುನಾವಣೆ ಯಲ್ಲಿ ಪರಾಜಿತರಾದರು.

ಶ್ರೀಮತಿ ಮಾಗಡಿಯವರ ಸೋಲು

ಮೈಸೂರು ರಾಜ್ಯದ ಕೈಗಾರಿಕಾ ಉಪ ಮಂತ್ರಿ ಶ್ರೀಮತಿ ಲೀಲಾವತಿ ಮಾಗಡಿಯವರನ್ನು ಸ್ವತಂತ್ರ ಪಕ್ಷದ ಶ್ರೀ ಕಾಶೀವಿಶ್ವರವರು ಪರಾಜಯಗೊಳಿಸಿರುವರು.

ಮಲ್ಲಾರಾಧ್ಯರ ಪರಾಜಯ

ಮೈಸೂರು ವಿಧಾನ ಸಭೆಯ ವಿರೋಧ ಪಕ್ಷದ ನಾಯಕರಾದ ಶ್ರೀ ಜೆ ಬಿ ಮಲ್ಲಾರಾಧ್ಯರವರು ಪರಾಜಿತರಾದರು. ಕಾಂಗ್ರೆಸಿನ ಶ್ರೀ ಎಂ ರಾಜಶೇಖರ ಮೂರ್ತಿಯವರು ಚುನಾಯಿತರಾದರು.

ಪಿ. ಎಸ್. ಪಿ. ಗೆ ಗೆಲುವು

ಮೈಸೂರು ಉತ್ತರ ಕ್ಷೇತ್ರದಿಂದ ವಿಧಾನ ಸಭೆಗೆ ಪ್ರಜಾ ಸೋಷಲಿಸ್ಟು ಪಕ್ಷದ ಶ್ರೀ ಬಿ ಕೆ ಪುಟ್ಟಯ್ಯನವರು ಚುನಾಯಿತರಾದರು.

ಕಾಂಗ್ರೆಸಿನ ವಿಜಯ

ಮೈಸೂರು ತಾಲ್ಲೂ ಕ್ಷೇತ್ರದಿಂದ ಶ್ರೀ ಕೆ ಪುಟ್ಟಸ್ವಾಮಿಯವರು ಚುನಾಯಿತರಾಪರು ಅವರು ಕಾಂಗ್ರೆಸಿನ ಉಮೇದುವಾರರು.

ನಿಜಲಿಂಗಪ್ಪನವರ ಸೋಲು

ಎಂ ಪಿ ಸಿ ಸಿ ಅಧ್ಯಕ್ಷ ಶ್ರೀ ನಿಜಲಿಂಗಪ್ಪನವರು ಹೊಸದುರ್ಗ ಕ್ಷೇತ್ರ ದಲ್ಲಿ ಪಿಎಸ್ಪಿಯ ಶ್ರೀ ಜೆ ಟಿ ರಂಗಪ್ಪನವರಿಂದ 5716 ಮತಗಳಿಂದ ಸೋತರು

ರಾಜ್ಯಸಭೆಗೆ ದ್ವಿವಾರ್ಷಿಕ ಚುನಾವಣೆಗಳು ನಡೆಯುವ ಬಗ್ಗೆ ಮಾರ್ಚ್ 7 ನೆಯ ತಾ| ಪ್ರಕಟಣೆಯೊಂದನ್ನು ಹೊರಡಿಸಬೇಕೆಂದು ಚುನಾವಣಾ ಮಂಡಳಿ ರಾಷ್ಟ್ರಪತಿಗಳಿಗೆ ಶಿಫಾರಸು ಮಾಡಿದೆ. 62 ರ ಏಪ್ರಿಲು 2 ರಂದು ನಿವೃತ್ತರಾಗುವ 72 ಜನ ಸದಸ್ಯರುಗಳ ಸ್ಥಾನಗಳಿಗಾಗಿ ಈ ಚುನಾವಣೆಗಳು ನಡೆಯುತ್ತವೆ ಮೈಸೂರಿನಲ್ಲಿ ನಾಲ್ಕು ಸ್ಥಾನಗಳಿಗೆ ಆಯ್ಕೆ ಆಗಬೇಕು.

೦೦

ಸಿಂಹಳದ ಗವರ್ನರ ಜನರಲ್‌ರಾಗಿ ಅಮೆರಿಕಾದಲ್ಲಿ ಸಿಂಹಳದ ರಾಯಭಾರಿ ಆಗಿರುವ ಹಬ್ಬು ಶ್ರೀ. ಗೋಪಲ್ಲುವರವರ ನೇಮಕವಾಗಿದೆ ಎಂದು ಸಿಂಹಳ ಸರ್ಕಾರ ಪ್ರಕಟಿಸಿದೆ

೦೦

ಮೈಸೂರು ರಾಜ್ಯದ ಮಂತ್ರಿಯವರು ಶ್ರೀಗಳಾದ ಹೆಚ್. ಎಂ ಚೆನ್ನಬಸಪ್ಪನವರು ಕೃಷ್ಣರಾಜ ನಗರ ಕ್ಷೇತ್ರದಲ್ಲಿ ಸ್ವತಂತ್ರಪಕ್ಷದ ಡಾ|| ಬಿ ಕೆ ಗೌಡಯ್ಯನವರಿಗೂ ಮಾಲಿ ಮರಿಯಪ್ಪನವರು ಸ್ವತಂತ್ರ ಸ್ಪರ್ಧಿ, ಸರಗೂ ಕ್ಷೇತ್ರದ ಶ್ರೀ ಸಿ ಜೆ ಮುಕ್ಕಣ್ಣಪ್ಪನವರಿಗೂ, ಡಾ|| ಕೆ ಕೆ ಹೆಗ್ಡೆಯವರು ದಯಾನಂದಕಲ್ಲೆಯವರಿಗೆ ಪರಾಜಿತರಾದರು ಉಪ ಮಂತ್ರಿ ಶ್ರೀ ಬಿ ಬಸವಲಿಂಗಪ್ಪನವರು ಸ್ವತಂತ್ರ ಸ್ಪರ್ಧಿ ಶ್ರೀ ಮುನಿಚಿನ್ನಪ್ಪನವರಿಂದ ಪರಾಜಿತರಾದರು.

ಶಿವಮ್ಮ ಹೊಲ್ಲರ್ ಕೊಲೆ ಆರೋಪದ ಸಂಬಂಧಪಟ್ಟಂತೆ ಬಿಜಾಪುರ ಡೆಪ್ಯೂಟಿ ಪೋಲೀಸು ಸೂಪರ್‌ಟಿಂಡೆಂಟರಾದ ಶ್ರೀ ಕಲ್ಲೂರರು ಮಠವೊಂದರ ಮೇಲೆ ದಾಳಿ ಮಾಡಲು 20 ಹುಡುಗಿಯರು ಪತ್ತೆ ಆದರೆಂದು ಬಿಜಾಪುರ ವಾರ್ತೆ. ಆ ವಂಲ್ಲಿ ವಿವಾಹಿತರ ಸಂಖ್ಯೆಯೇ ಹೆಚ್ಚು. ಮಠದಲ್ಲಿ ಇಷ್ಟು ಹುಡುಗಿಯರು ಇರುವ ಕುರಿತು ಕಲ್ಲೂರರು ಆಶ್ಚರ್ಯ ವ್ಯಕ್ತ ಮಾಡಿದರು. ಅನೈತಿಕ ಉದ್ದೇಶಗಳಿಗೆ ಈ ಹುಡುಗಿಯರನ್ನು ಇಟ್ಟುರುವ ಆರೋಪವಿದೆ.

ರಂಜಾನಿನ ಅಂತ್ಯದ ವೇಳೆಗೆ ಅಲ್ಜೀರಿಯಾದಲ್ಲಿ ಸಮಂಸಮಾಪ್ತವಾಗುವ ಸಂಭವವಿದೆ.

ಜಮ್ಮು-ಕಾಶ್ಮೀರದಲ್ಲಿ ರಾಷ್ಟ್ರೀಯ ಸಮ್ಮೇಳನಕ್ಕೆ ಸ್ಪಷ್ಟವಾದ ಬಹುಮತ ದೊರೆತಿದೆ.

ಆಂಧ್ರ, ಮದ್ರಾಸು, ಪಂಜಾಬ್ ಹಾಗೂ ಅಸ್ಸಾಂನಲ್ಲಿ ಕಾಂಗ್ರೆಸುಪಕ್ಷಕ್ಕೆ ಸ್ಪಷ್ಟವಾದ ಬಹುಮತ ದೊರೆತಿದೆ. ಮಹಾರಾಷ್ಟ್ರ ಹಾಗೂ ಗುಜರಾತುಗಳಲ್ಲಿ ಬಹುಮತ ದೊರೆತಿದೆ.

ನಾಳೆಯ ಪಂಚಾಂಗ

ಆಸ್ಥಾನ ಮಹಾವಿದ್ವಾ ಧರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕೃಷ್ಣ ಜೋಯಿಸರಿಂದ

1 ದಶಮಿ ವಾಸರ

ವಿವಿಧ ವಿಷಯಗಳು

★

ಲಂಡನ್ — ಇಲ್ಲೀವರೆಗೆ ಅಕ್ಸ್ ಫರ್ಡ್ ಯೂನಿಯನ್ನಿಗೆ ಜಚ್ಚಾ ಸದಸ್ಯತ್ವಕ್ಕೆ ಮಹಿಳೆಯಂನ್ನು ಸೇರಿಸುತ್ತಿಂಲಿಲ್ಲ' ಆದರೆ ಅತಿಥಿ ಮಾತನಾಡುವವಂತಾಗಿ ಬರಬಹುದಾಗಿತ್ತು ; ಈಗ ಮಹಿಳೆಯರಿಗೆ ಅವಕಾಶ ಕೊಡಲು ನಿರ್ಧರಿಸಲಾಗಿದೆ.

oo

ಜಾರ್ಜ್‌ಟೌನ್— ಬಿಟಿಷ್ ಗಯಾನಾದಲ್ಲಿ ಕಳೆದ ವಾಂ ನಡೆದ ದೇಶಾದ್ಯಂತದ ಗಲಭೆಯಲ್ಲಿ 6 ಮಂ ದಿ ಸತ್ತು 200 ಮಂದಿ ಗಾಯಗೊಂಡು 10 ಮಿಲಿಯ ಪೌಂಡು ಆಸ್ತಿಪಾಸ್ತಿ ನಷ್ಟವಾಗಿರುವುದರಿಂದ 1000 ಸಂಸ್ಥಾನಗಳು ಅಲ್ಲಿಂದ ತೆರಳಲು ಯೋಚಿಸಿವೆ.

oo

ಮಧುರೈ—ಶುಕ್ರವಾರ ಒಂದು ಗಾಡಿಯಿಂದ ಎಟಿವಾಪುರಕ್ಕೆ ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದ ಮಹಿಳೆಯೊಬ್ಬಳು, ಬಸ್ಸಿನಲ್ಲೇ ಹೆತ್ತಳು ; ಡ್ರೈವರು ಮತ್ತು ಕಂಡಕ್ಟರು ಮಗುಬಾಣಂತಿಯನ್ನು ಆಸ್ಪತ್ರೆಗೆ ಕರೆದುಕೊಂಡುಹೋಗಿ ಬಿಟ್ಟರು.

oo

ನವದೆಹಲಿ— ದೆಹಲಿ ಮುನಿಸಿಪಲ್ ಕಾರ್ಪೋರೇಷನ್ನಿನ 16 ಸ್ಥಾನಗಳಲ್ಲಿ 14 ಕಾಂಗ್ರೆಸ್ಸಿಗೆ ಲಭಿಸಿತು : 2 ಜನಸಂಘಕ್ಕೆ ದೊರೆಯಿತು.

oo

ವಾಷಿಂಗ್ಟನ್ನಿನ ವಾರ್ತೆಯಂತೆ ಅಧ್ಯಕ್ಷ ಕೆನಡಿಯವರ ಸತಿಯವರ ಭಾರತದ ಪ್ರವಾಸವು 8 ದಿವಸಗಳು ಮುಂದಕ್ಕೆ ಹಾಕಲಾಗಿದೆ

oo

ತರಣತಾರಣ (ಪಂಜಾಬು)— ಟ್ರಾಫಿಕ್ಕಿಗೆ ಅಡ್ಡಿಪಡಿಸಿದ ಆಪಾದನೆಗಾಗಿ ಮೂವ್ವರು ತಾರಾಸಿಂಗರು ದಸ್ತಗಿರಿ ಮಾಡಲ್ಪಟ್ಟರು ನಂತರ ಬಿಡುಗಡೆ ಮಾಡಲ್ಪಟ್ಟರು ; 34 ಓಟ ಗಳಿಂದ ಜಯಗಳಿಸಿದ ಪ್ರತಾಪಸಿಂಗರು ಕೈರಾನಂ ಓಟುಗಳನ್ನು ಮತ್ತೆ ಎಣಿಕೆ ಆಗಬೇಕೆಂದು ಬೈ ಟ ಕೋರ್ಟ ಹಿಡಿದಿದ್ದರು.

oo

ಕಾಶ್ಮೀರ ಸಮಸ್ಯೆ ಪರಿಹಾರಕ್ಕೆ ಹೊರಗಿನವರಿಂದ ಹೆಚ್ಚು ಸಹಾಯ ಆಗಲಾರದೆಂದು ಅಧ್ಯಕ್ಷ ಕೆನೆಡಿಯವರು ಸಲಹೆಗಾರ ಚೆಸ್ಟರ್ ಬೌಲ್ಸರು ನವ ದೆಹಲಿಯಲ್ಲಿ ತಿಳಿಸಿದರು

——

ವುಡ್‌ಲ್ಯಾಂಡ್ಸ್ ಜನಭರಿತ 3 ನೇ ವಾರ

.... ಸಹಸ್ರಗಟ್ಟಿ ಜನರು ನೋಡಿ ಆನಂದಿಸುತ್ತಿರುವ ಅಪೂರ್ವ ಚಿತ್ರರತ್ನ ....

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್, ಹೆಲೆ

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ — 23-2-62 ರಿಂದ

ಮೋಹಿನಿ ರುಕ್ಮಾಂಗದ

[ಏಕಾದಶಿ ಮಹಾತ್ಮೆ] (ಕನ್ನಡ)

ನಟವರ್ಗ— ಜಮುನ, ಜಗ್ಗಯ್ಯ, ಸೂರ್ಯಕಲಾ, ರೇಲಂಗಿ, ಕಾಂತಾರಾವ್

[ದಿನವಹಿ 3 ಆಟಗಳು]

Help The 'Gorakshana'

For Quality Printing

L. N. Press

Sivarampet, Mysore

ಎಲ್ಲ ವಿಧದ ಆಯುರ್ವೇದ ಔಷಧಗಳಿಗೆ

ಅ ಶೋ ೀ ಕಾ ಫಾರ್ಮೆಸಿ

ಲ್ಯಾನ್ಸ್‌ಡೌನ್ ಬಜಾರ್ ಮೈಸೂರು

Edited, Printed & Published by the Proprietor, Dharma PracharaNirata M. S. Krishna Rao at the Satyavadi Press Chamarajapuram, Mysore 4.

ಇವರೇ

ಹಮಾಮ್ ಸಾಬೂನು ಸ್ಪರ್ಧೆಯ ಬಹುಮಾನಗಳನ್ನು ಗೆದ್ದ ಭಾಗ್ಯಶಾಲಿಗಳು

ಮೊದಲನೆಯ ಬಹುಮಾನ: ರೂ. 2,000/- ಶ್ರೀ. ಯು. ಕೃಷ್ಣ, 39, ನಂ. 1/ಎ, ಮಾರ್ಕೆಟ್ ರೋಡ್, ಬೆಂಗಳೂರು-4.

ಎರಡನೆಯ ಬಹುಮಾನ: ರೂ. 1,000/- ಕುಮಾರಿ ಆರ್. ಭಾರತಿ, 79, ಪಾನ್ ರೋಡ್, ಫ್ರೇಸರ್ ಟೌನ್, ಬೆಂಗಳೂರು-5 ಮತ್ತು ಶ್ರೀ. ಎಮ್. ವಿ. ಅಹಮದ್, ಪೋ. ಆ. ಮರನ್‌ಚೆರಿ, ವಯಾ ಪೊನ್ನಾನಿ, ಕೇರಳ, ಇವರಿಬ್ಬರೊಳಗೆ ವಿಭಾಗಿಸಲ್ಪಟ್ಟಿದೆ.

ಮೂರನೆಯ ಬಹುಮಾನ: ರೂ. 500/- ಶ್ರೀ. ಆರ್. ಎಮ್. ಕಾಲ್‌ಗಲ್, ಬಿ.ಇ., ಅಸಿಸ್ಟಾಂಟ್ ಇಂಜಿನಿಯರ್ (ಇಲೆಕ್ಟ್ರಿಕಲ್), ಕನ್‌ಸ್ಟ್ರಕ್ಷನ್ ಸಬ್ ಡಿವಿಜನ್, ಮೈಸೂರು ಸ್ಟೇಟ್ ಇಲೆಕ್ಟ್ರಿಸಿಟಿ ಬೋರ್ಡ್, ಗದಗ್ ಮತ್ತು ಶ್ರೀ. ವಿದ್ಯಾಧರ್ ಎಲ್. ಕಾಮತ್, ಕ್ಯಾರ್ ಆಫ್ ಶ್ರೀ. ಎಲ್. ಎಸ್. ಕಾಮತ್, ಪ್ರಿನ್ಸಿಪಾಲ್, ಕೆನರಾ ಕಾಲೇಜ್, ಕುಮ್ಟಾ (ಉತ್ತರ ಕನ್ನಡ) ಇವರೊಳಗೆ ವಿಭಾಗಿಸಲ್ಪಟ್ಟಿದೆ.

ರೂ. 50/-ರ ಪ್ರೋತ್ಸಾಹಕ ಬಹುಮಾನಗಳು:

ಶ್ರೀಮತಿ ಆಯ್ತಾ ನೊರೊನ್ಹಾ, ಬೆಂಗಳೂರು. ಶ್ರೀಮತಿ ಓ. ಜಿ. ಆಡಮ್ಸ್, ಬೆಂಗಳೂರು. ತಾರಾಬಾಯಿ, ಬಿಜಾಪುರ್. ಕುಮಾರಿ ಎಮ್. ಪಿ. ಮ್ಯಾಥ್ಯೂಸ್, ಕೊಚ್ಚಿ. ಶ್ರೀ. ವಿ. ಗೋಪಾಲಕೃಷ್ಣನ್ ನಾಯರ್, ತಿರುವನಂತಪುರಮ್. ಶ್ರೀಮತಿ ಇ. ಪೆರಿ, ಬೆಂಗಳೂರು. ಶ್ರೀ. ಕೆ. ಕೃಷ್ಣ ಭಟ್, ಬಲ್ಲ. ಶ್ರೀ. ಪಿ. ಆರ್. ಕಾಮತ್, ಮುಲ್ಕಿ. ಶ್ರೀ. ಎಮ್. ರಬೀಂದ್ರನಾಥನ್ ನಾಯರ್, ಕೋಟ್ಟಯಮ್. ಶ್ರೀಮತಿ ಪಿ. ಎಸ್. ಸುಬ್ಬುಲಕ್ಷ್ಮಿ, ಕೊಲ್ಲಮ್.

ಪೂರ್ತಿ ಸರಿಯಾದ, ಬಹುಮಾನವನ್ನು ಗೆದ್ದ, ಉತ್ತರ

- ಹಮಾಮನ್ನು ನಾನು ಇಚ್ಛಿಸುತ್ತೇನೆ, ಏಕೆಂದರೆ ಅದು ಹೆಚ್ಚು ಬಾಳಿಕೆ ಬರುತ್ತದೆ (11)
- ಹಮಾಮನ್ನು ನಾನು ಕೊಂಡುಕೊಳ್ಳುತ್ತೇನೆ ಏಕೆಂದರೆ ಅದು ಮಿತವ್ಯಯಕರವಾಗಿದೆ (3)
- ಅದರ ಸೌಮ್ಯ, ನಿರ್ಮಲಕರ ಗುಣದಿಂದಾಗಿ ಹಮಾಮ್‌ನಿಂದ ಸ್ನಾನ ಮಾಡುವುದೆಂದರೆ ನನಗೆ ಬಹಳ ಆನಂದ (12)
- ಹಮಾಮನ್ನು ನಾನು ಆರಿಸುತ್ತೇನೆ ಏಕೆಂದರೆ ಅದು ಉಲ್ಲಾಸದಾಯಕವಾಗಿದೆ (5)
- ಅದರ ಅನುಕೂಲವಾದ ಸೈಜ್‌ಗಾಗಿ ನಾನು ಹಮಾಮನ್ನು ಬಹಳ ಮೆಚ್ಚುತ್ತೇನೆ (15)

ಹಮಾಮ್

—ಕೌಟುಂಬಿಕ ಸಾಬೂನಿನ ನಿರ್ಮಾಣಕರಿಂದ

ನಿಮಗೆಲ್ಲ ಅಭಿನಂದನೆಗಳು

THY-35